

ಮಿನಿಸ್ಟರ್ ಆಫೀಸಿನಿಂದ ನನಗೆ ಪತ್ರ ಬಂತು. “ಸಾಕ್ಷ್ಯಾಧಾರಗಳಿದ್ದರೆ ಪರಿಶೀಲಿಸಲಾಗುವುದು.”

ಒಂದಷ್ಟು ಹೊತ್ತು ವಿಷಾದದ ಮೌನ. ಡಾ. ಸೋನಿಪತ್ ಮತ್ತೆ ಸಿಗಾರ್ ಹೊತ್ತಿಸಿ ನಾಲ್ಕು ದಮ್ಮು ಎಳಕೊಂಡರು. ನನಗೋ ತಡೆಯಲಾಗದ ಕುತೂಹಲ.

“ಮತ್ತೆ ನೀವು ಇಂಡಿಯಾಕ್ಕೆ ಬಂದು ಬಿಟ್ರಾ ಸರ್?”

“ಅಷ್ಟು ಹೊತ್ತಿಗೆ ನನ್ನ ಕೋರ್ಟು ಕೇಸುಗಳು ಮುಗಿದವು. ನಾನು ಅಪರಾಧಿ ಎಂದು ನಿರೂಪಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಯಿತು. ನನ್ನ ಲೆಕ್ಕದ ಪ್ರಕಾರ ಬ್ರಿಟಿಷ್ ಕಸ್ಟಮ್ಸ್ ಡಿಪಾರ್ಟ್‌ಮೆಂಟ್ ನನಗೆ ಒಂಬತ್ತು ಮಿಲಿಯನ್ ಪೌಂಡ್ ಪರಿಹಾರ ಕೊಡಬೇಕಿತ್ತು. ಅದು ಸಿಗದ ಕಾರಣ ನಾನು ಲೇಬರ್ ಟ್ರಿಬ್ಯೂನಲ್ಲಿಗೆ ಅರ್ಜಿ ಸಲ್ಲಿಸಿದೆ. ನನ್ನ ಹ್ಯಾಲಿಫ್ಯಾಕ್ಸ್ ಬಾಡಿಗೆ ಮನೆಯನ್ನು ಬಿಟ್ಟು ಶಾಶ್ವತವಾಗಿ ಲಂಡನ್ನಿನ ಗುರುದ್ವಾರದಲ್ಲಿ ನೆಲೆಸಿದೆ. ಅಲ್ಲಿ ಪ್ರತಿ ಆದಿತ್ಯವಾರ ಖಲಿಸ್ತಾನ್‌ವಾದಿಗಳು ಮೀಟಿಂಗು ನಡೆಸುತ್ತಿದ್ದರು. ಅದರಲ್ಲಿ ಶ್ರೀಲಂಕಾದ ತಮಿಳು ಈಳಂ ಹೋರಾಟಗಾರರೂ ಪಾಲ್ಗೊಳ್ಳುತ್ತಿದ್ದರು. ಪ್ರಚಂಡ ಬುದ್ಧಿವಂತನಾದ ಒಬ್ಬ ಒಂಟಿಗಾಲಿನವ ಬರುತ್ತಿದ್ದ. ಶ್ರೀಲಂಕಾದ ಬಾಂಬ್ ಬ್ಲಾಸ್ಟಿನಲ್ಲಿ ಅವನು ಒಂದು ಕಾಲನ್ನು ಕಳೆದುಕೊಂಡದ್ದಂತೆ. ಅವನ ಹೆಸರು ಮರೆತಿದ್ದೇನೆ. ತಮಿಳು ಈಳಂ ಸದಸ್ಯರ ಅಜೆಂಡಾ ಒಂದೇ ಆಗಿತ್ತು. ರಾಜೀವ ಗಾಂಧಿಯನ್ನು ಮುಗಿಸುವುದು.'' ಡಾ. ಸೋನಿಪತ್ ಸೂರಿನತ್ತ ದೃಷ್ಟಿ ಹಾಯಿಸಿ ಎರಡು ದಮ್ಮು ಎಳೆದು ಮಾತು ಮುಂದುವರಿಸಿದರು.

''ನನಗೆ ತಡೆಯಲಾಗಲಿಲ್ಲ. ಒಂದು ದಿನ ಆ ಒಂಟಿ ಕಾಲಿನವನಲ್ಲಿ ಕೇಳಿದೆ, “ನಿಮಗೆ ಯಾಕೆ ರಾಜೀವ ಗಾಂಧಿ ಮೇಲೆ ಸಿಟ್ಟು?

ಅವನಿಗೆ ಸಿಟ್ಟು ಬಂದು ತೀಕ್ಷ್ಣವಾಗಿ ನನ್ನನ್ನು ನೋಡಿದ. “ನೀನು ಇಂಡಿಯನ್ ಸ್ಪೈಯಾ?”

“ಅಲ್ಲಲ್ಲ. ನಾನು ನೂರಕ್ಕೆ ನೂರರಷ್ಟು ಸಿಖ್. ನಾವು ಇಂಡಿಯಾದಿಂದ ಖಲಿಸ್ತಾನವನ್ನು ಪಡಕೊಳ್ಳುತ್ತೇವೆ. ನೀವು ಶ್ರೀಲಂಕಾದಿಂದ ಈಳಂ ಅನ್ನು ಪಡಕೊಳ್ಳಿ. ನಾವೆಲ್ಲಾ ಒಟ್ಟಿಗೆ ಹೋರಾಡೋಣ” ಎಂದೆ.

ಅವನಿಗೆ ವಿಶ್ವಾಸ ಬಂತು. ಊರುಗೋಲನ್ನು ಬಳಸಿ ನನ್ನ ಹತ್ತಿರ ಬಂದ. “ನಿನ್ನ ರಾಜೀವ ಗಾಂಧಿ ಪೀಸ್ ಕೀಪಿಂಗ್ ಆರ್ಮಿಯನ್ನು ಶ್ರೀಲಂಕಾಕ್ಕೆ ಕಳುಹಿಸದೆ ಇರುತ್ತಿದ್ದರೆ ನಮ್ಮ ವೇಳುಪಿಳ್ಳೈ ಪ್ರಭಾಕರನ್ ಅಧ್ಯಕ್ಷತೆಯಲ್ಲಿ ತಮಿಳು ಈಳಂ ಈಗಾಗಲೇ ಸ್ವತಂತ್ರ ರಾಷ್ಟ್ರವಾಗುತ್ತಿತ್ತು. ಆ ಹೋರಾಟದಲ್ಲಿ ನಾನು ಈ ಕಾಲು ಕಳಕೊಂಡೆ, ಎಷ್ಟೊಂದು ಜನ ಬಲಿಯಾದರು? ಎಷ್ಟು ರೇಪುಗಳಾದವು? ಎಷ್ಟೊಂದು ತಮಿಳರು ಮನೆ, ಪ್ರಾಣ, ಮಾನ, ಆಸ್ತಿ, ಸೊತ್ತುಗಳನ್ನು ಕಳಕೊಂಡರು ಗೊತ್ತಾ? ಸತ್ತು ಹೋದವರ ಆತ್ಮಗಳಿಗೆ ಶಾಂತಿ ಸಿಗಬೇಡವೆ? ಹಿ ಈಸ್ ಏನ್ ಇಮ್ಮೆಚೂರ್ಡ್ ಫೂಲೀಶ್ ಫೆಲೋ. ನಿನ್ನ ಕಣ್ಣಿಗೆ ನಾನು ಉಗ್ರಗಾಮಿಯ ಹಾಗೆ ಕಾಣ್ತದ್ದೀನಾ? ನೀನು ಮಾತ್ರ ನನ್ನ ಕಣ್ಣಿಗೆ ಖದೀಮನ ಹಾಗೆ ಕಾಣಿಸ್ತಿದ್ದೀಯಾ. ಎಲ್ಲಾದರೂ ನೀನು ಸ್ಪೈ ಮಾಡಿದ್ರೆ ನೋಡಿಲ್ಲಿ” ಎಂದು ಅಂಗೈಯಲ್ಲಿ ಹಿಡಿಸುವ ಸಣ್ಣ ಪಿಸ್ತೂಲು ತೆಗೆದ.

“ಒರಿಜಿನಲ್, ಚೀನಾ ಮೇಡ್. ನಿನ್ನಂಥ ಇರುವೆಗೆ ಬಿಡು. ರಾಜೀವ್ ಗಾಂಧಿಯಂಥ ಆನೆಗೂ ಒಂದು ಸಾಕು.”

ನಾನು ಭಯದಿಂದ ಕಣ್ಣು ಮುಚ್ಚಿಕೊಂಡೆ. ಅವನು ಕೋಲೂರಿಕೊಂಡು ಹೊರಟು ಹೋದ. ನಾನು ಪೋಸ್ಟಾಫೀಸಿಗೆ ಹೋಗಿ ಪ್ರಧಾನಮಂತ್ರಿ ಕಾರ್ಯಾಲಯಕ್ಕೆ ಪತ್ರ ಬರೆದೆ. ''ರಾಜೀವ್ ಗಾಂಧಿಗೆ ತಮಿಳುನಾಡಿನಲ್ಲಿ ಜೀವ ಬೆದರಿಕೆ ಇದೆ. ಅಲ್ಲಿ ಪ್ರಚಾರಕ್ಕೆ ಅವಕಾಶ ಮಾಡಿಕೊಡಬೇಡಿ'' ಎಂದು ಎಕ್ಸ್‌ಪ್ರೆಸ್ ಕೇಬಲ್ ಕೂಡಾ ಕಳಿಸಿದೆ. ಈ ಬಾರಿಯೂ ಎರಡು ತಿಂಗಳ ಬಳಿಕ ಉತ್ತರ ಬಂತು. “ಸಾಕ್ಷ್ಯಾಧಾರಗಳಿದ್ದರೆ ಪರಿಶೀಲಿಸಲಾಗುವುದು.” ಇದಾಗಿ ಒಂದೇ ವಾರದಲ್ಲಿ ಶ್ರೀ ಪೆರಂಬದೂರಿನಲ್ಲಿ